ದಿಃ 19.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ ವಕೀಲರಿಂದ **1** ಮತ್ತು **4** ನೇ ಪ್ರತಿವಾದಿಯರ  ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 16.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ., ವಕೀಲರಿಂದ 1 ಮತ್ತು 4 ನೇ ಪ್ರತಿವಾದಿಯರ ಪರವಾಗಿ

2. ಮೂರು ವಿದ್ಯುತ್ ಬಿಲ್ಲುಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿ.ಡಿ.1 ರಿಂದ 3 ಎಂದು, 4 ವಿದ್ಯುತ್ ಬಿಲ್ ಪಾವತಿಯ ರಶೀದಿಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿ.ಡಿ.4 ರಿಂದ 7 ಎಂದು, 4 ನೇ ಪ್ರತಿವಾದಿಗೆ ಮೂಡಿಗೆರೆಯ ತಹಶೀಲ್ದಾರ್ ರವರು ನೀಡಿರುವ ಹಕ್ಕು ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿ.ಡಿ.8 ಎಂದು, ನಿ.ಡಿ.8 ಹಕ್ಕು ಪತ್ರದಲ್ಲಿ ಹೇಳಿರುವ ಸ್ವತ್ತಿಗೆ ಸಂಬಂಧಿಸಿದಂತೆ ನಕ್ಷೆಯನ್ನು ಹಾಜರುಮಾಡಿದ್ದು ಅದನ್ನು ನಿ.ಡಿ.9 ಎಂದು, ಎರಡು ಕಂದಾಯ ಪಾವತಿಯ ರಶೀದಿಗಳನ್ನು ಹಾಜರುಮಾಡಿದ್ದು ಅದನ್ನು ನಿ.ಡಿ.10 ಮತ್ತು ನಿ.ಡಿ.11 ಎಂದು, ಕಳಸ ಗ್ರಾಮ ಪಂಚಾಯಿತಿಯ PDO ರವರು ಕಂದಾಯವನ್ನು ಪಾವತಿಸಿದ ಬಗ್ಗೆ ನೀಡಿದ ದೃಢೀಕರಣ ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿ.ಡಿ.12 ಎಂದು, ಮೂಡಿಗೆರೆಯ ತಾಲ್ಲೂಕು ಕಾನೂನು ಸೇವಾ ಸಮಿತಿ ರವರು ನೀಡಿರುವ ನೋಟೀಸ್ ಹಾಜರುಮಾಡಿದ್ದು ಅದನ್ನು ನಿ.ಡಿ.13 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಎ.ಎಸ್ ವಕೀಲರಿಂದ ವಾದಿಯರ ಪರವಾಗಿಃ

3. ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 30.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಬಿ.ಎ.ಎಸ್ ವಕೀಲರಿಂದ ವಾದಿ ಪರವಾಗಿ</u>

4. ವಾದಿಯರು, ನಾನು ಮತ್ತು 2 ಮತ್ತು 3 ನೇ ಪ್ರತಿವಾದಿಗಳು ಬಿ. ಮೊಹಮದ್ ಶೇಕ್ ರವರ ಮಕ್ಕಳು ಎಂದರೆ ಸರಿ. 4 ನೇ ಪ್ರತಿವಾದಿ ಹಾಜಿರಾ ನನ್ನ ಹೆಂಡತಿ ಎಂದರೆ ಸರಿ. ವಿಭಾಗಕ್ಕೆ ಕೋರಿದ ಸ್ವತ್ತು ಮನೆ ಮತ್ತು ಖಾಲಿ ಜಾಗ ಎಂದರೆ ಸರಿ. ಆ ಮನೆ ಮತ್ತು ಖಾಲಿ ಜಾಗ ನಮ್ಮ ಅಣ್ಣ ತಮ್ಮಂದಿರ ನಡುವೆ ವಿಭಾಗ ಆಗಿಲ್ಲ ಎಂದರೆ ಸರಿ. ಆ ಆಸ್ತಿಯ ಖಾತೆ ನನ್ನ ಮತ್ತು ನನ್ನ ಸಹೋದರರ ಜಂಟಿ ಖಾತೆಯಲ್ಲಿ ಇದೆ ಎಂದರೆ ಸರಿ. ದಾವ ಸ್ವತ್ತು ಮೂಲತಃ ನನ್ನ ತಂದೆಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ದಾವ ಸ್ವತ್ತನ್ನು ಹೊರತುಪಡಿಸಿ ಬೇರೆ ಸ್ವತ್ತು ನಿಮಗೆ ಇದೆಯಾ ಎಂದರೆ ಸಾಕ್ಷಿ ಬೇರೆ ಸ್ವತ್ತು ಮಾರಟವಾಗಿದೆ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು ನನ್ನ ಜೊತೆ ವಾಸವಾಗಿದ್ದಾರೆ. ದಾವ ಸ್ವತ್ತಿನಲ್ಲಿ ನನಗೆ ಇರುವ ಹಕ್ಕಿನಷ್ಟೆ ಹಕ್ಕು ಇದೆ ಎಂದರೆ ಸಾಕ್ಷಿ ನನ್ನ ತಂದೆ ನನ್ನ ಹೆಸರಿಗೆ ವಿಲ್ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆ ವೀಲು ನಾಮೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ವೀಲು ನಾಮೆಯ ಆಧಾರದ ಮೇಲೆ ದಾವ ಸ್ವತ್ತಿನ ಖಾತೆಯನ್ನು ಬದಲಾವಣೆ ಮಾಡಿಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ವಿಲ್ ಅನ್ನು ನಮ್ಮ ತಂದೆ ಮಾಡಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ನನ್ನ ತಂದೆ ಒಬ್ಬರ ಬಳಿ 1 ಲಕ್ಷ ಸಾಲ ಪಡೆದಿದ್ದರು, ನನ್ನ ತಂದೆ ತೀರಿಕೊಂಡ ಬಳಿಕ ಅವರು ವೀಲು ನಾಮೆಯ ಬಗ್ಗೆ ತಿಳಿಸಿದರು. ನನ್ನ ತಂದೆ ಆ ರೀತಿಯ ಯಾವುದೇ ವೀಲು ನಾಮೆಯನ್ನು ಬರೆದುಕೊಡದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ ಅನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ವೀಲು ನಾಮೆಯ ದಿನಾಂಕ ನನಗೆ ಗೊತ್ತಿಲ್ಲ. 1991 ರ ನಂತರ ನನ್ನ ತಂದೆ 4 ವರ್ಷಗಳ ಕಾಲ ಬದುಕಿದ್ದರು.

6. ನನಗೆ ಮಂಜೂರಾಗಿದೆ ಎಂದು ತೋರಿಸಲು ಹಾಜರು ಪಡಿಸಿರುವ ನಿ.ಡಿ.8 ರ ಆಸ್ತಿಯ ಪೂರ್ವಕ್ಕೆ ಬಿ. ಮೊಹಮದ್ ಶೇಕ್ ರವರ ಮನೆ, ಪಶ್ಚಿಮಕ್ಕೆ ಖಾಲಿ ಜಾಗ,

ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಸರ್ಕಾರಿ ಆಸ್ಪತ್ರೆ ಬರುತ್ತದೆ. ನನ್ನ ಹೆಸರಿಗೆ ಈಗಾಗಲೇ ಮನೆ ಇರುವುದರಿಂದ ನನಗೆ ನಿ.ಡಿ.8 ರಂತೆ ಸರ್ಕಾರದವರು ಮನೆಯನ್ನು ಮಂಜೂರು ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ಮನೆಯನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಮನೆ ಇಲ್ಲ ಎಂದರೆ ಸಾಕ್ಷಿ ನಿ.ಡಿ.8 ಹಕ್ಕು ಪತ್ರದಲ್ಲಿ ಮಂಜೂರಾಗಿರುವ ಮನೆಯಲ್ಲಿ ನಾನು ಇದ್ದೇನೆ ಎಂದು ನುಡಿಯುತ್ತಾರೆ. ನಿ.ಡಿ.8 ಹಕ್ಕು ಪತ್ರ ನೀಡಿದ ಬಳಿಕ ನೀವು ಮನೆಯನ್ನು ನಿರ್ಮಿಸಿದ್ದೀರಾ ಎಂದರೆ ಹೌದು. ಕಂದಾಯ ಅಧಿಕಾರ ಜೊತೆ ಶಾಮೀಲ್ ಆಗಿ ನಿ.ಡಿ.8 ಅನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಅಂಗಳಕ್ಕೆ ಸಂಬಂಧಿಸಿದಂತೆ ನಿ.ಡಿ.8 ಅನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ರಾಜಕೀಯ ಪ್ರಭಾವವನ್ನು ಬಳಸಿ ನಿ.ಡಿ.8 ಹಕ್ಕು ಪತ್ರವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

7. ದಾವ ಸ್ವತ್ತಿನ ಕಂದಾಯವನ್ನು ಯಾರು ಪಾವತಿಸುತ್ತಿಲ್ಲ. 2022-2023 ರವರೆಗೆ ಕಂದಾಯವನ್ನು ದಾವ ಸ್ವತ್ತಿಗೆ ನಾನು ಪಾವತಿಸಿದ್ದೇನೆ. ನಾನು ದಾವ ಸ್ವತ್ತಿನಲ್ಲಿ ವಾಸ ಇರುವುದರಿಂದ ವಾದಿಯರು ಹಲವಾರು ಬಾರಿ ಬಂದು ದಾವ ಸ್ವತ್ತಿನಲ್ಲಿ ಪಾಲು ಕೊಡಿ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ನಾನು ದಾವ ಸ್ವತ್ತು ನನಗೆ ಸೇರಿದ್ದು, ಅದರಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದು ಹೇಳಿ ಕಳಿಸಿದ್ದೆ ಎಂದರೆ ಸರಿಯಲ್ಲ. ಮನೆ ಮುಂದೆ ಇರುವ ಅಂಗಳಕ್ಕೆ ಸಂಬಂಧಿಸಿದಂತೆ ನಿ.ಡಿ.8 ಹಕ್ಕು ಪತ್ರವನ್ನು ಪಡೆಯುವಾಗ ನಾನು ಇತರ ಹಕ್ಕುದಾರರ ಯಾವುದೇ ಒಪ್ಪಿಗೆ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಯಾರು ನನ್ನನ್ನು ಕೇಳಲು ಬಂದಿಲ್ಲ, ಆದ್ದರಿಂದ ಖಾಲಿ ಜಾಗಕ್ಕೆ ಹಕ್ಕು ಪತ್ರ ಪಡೆದಿದ್ದೇನೆ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 04.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಬಿ.ಎ.ಎಸ್ ವಕೀಲರಿಂದ ವಾದಿ ಪರವಾಗಿ

8. ನಿ.ಡಿ.8 ರಂತೆ ಮಂಜೂರಾಗಿರುವ ಹಕ್ಕು ಪತ್ರದ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ 2 ವರ್ಷಗಳಿಂದ ವಾಸವಿದ್ದೆವು. ಈಗ ನಾವು ಅದೇ ಮನೆಯಲ್ಲಿ ವಾಸವಿದ್ದೇವೆ. ಮನೆ ಮಂಜೂರಾತಿಗಾಗಿ 2015-2016 ರಲ್ಲಿ ಅರ್ಜಿಯನ್ನು ತಹಶೀಲ್ದಾರವರಿಗೆ ಸಲ್ಲಿಸಿದ್ದೇನೆ. ನಿ.ಡಿ.8 ಹಕ್ಕು ಪತ್ರವನ್ನು ತಾಲ್ಲೂಕು ಕಚೇರಿಯಲ್ಲಿ ನೀಡಿದ್ದರು. ಆ ಮನೆಯಲ್ಲಿ 4 ಕೋಣೆಗಳು ಇರುತ್ತವೆ. ಆ ಮನೆಗೆ ಪ್ರತ್ಯೇಕ ವಿದ್ಯುತ್ ಸಂಪರ್ಕ ಇರುವುದಿಲ್ಲ. ಆ ಮನೆಗೆ ನೀರಿನ ನಲ್ಲಿ ಸಂಪರ್ಕ ಇರುತ್ತದೆ. ದಾವ ಸ್ವತ್ತಿಗೂ ಮತ್ತು ನಿ.ಡಿ.8 ರಲ್ಲಿ ಹೇಳಿರುವ ಮನೆಗೂ ಒಂದೇ ವಿದ್ಯುತ್ ಸಂಪರ್ಕ ಇರುತ್ತದೆ. ನಿ.ಡಿ.8 ಹಕ್ಕು ಪತ್ರವನ್ನು ನೀಡಿದ ಬಳಿಕ ನನ್ನ ಹೆಂಡತಿಯ ಹೆಸರಿಗೆ ಆ ಆಸ್ತಿಯ ಖಾತೆಯನ್ನು ಮಾಡಲು ಪ್ರಯತ್ನಿಸಿರುತ್ತೇನೆ. ಯಾವ ಕಾರಣಕ್ಕೆ ನನ್ನ ಹೆಂಡತಿಯ ಹೆಸರಿಗೆ ಆ ಮನೆಯ ಖಾತೆ ಆಗಿಲ್ಲ ಎಂದು ನನಗೆ ಗೊತ್ತಿಲ್ಲ. ನಿ.ಡಿ.10 ಮತ್ತು 11 ರಂತೆ ಕಂದಾಯವನ್ನು ನಾನು ಪಾವತಿಸಿರುತ್ತೇನೆ. ನಿ.ಡಿ.8 ಹಕ್ಕು ಪತ್ರವನ್ನು ಕಂದಾಯ ಅಧಿಕಾರಿಗಳ ಜೊತೆ ಶಾಮಿಲ್ ಆಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

9. ನಿ.ಡಿ.8 ಹಕ್ಕು ಪತ್ರದ ಪ್ರಕಾರ ನನ್ನ ಹೆಂಡತಿಯ ಹೆಸರಿಗೆ ಖಾತೆ ಏಕೆ ಆಗಿಲ್ಲ ಎಂದು ನಾನು ಪಂಚಾಯಿತಿಯವರಿಗೆ ಅರ್ಜಿ ಸಲ್ಲಿಸಿ ವಿಚಾರಿಸಿಲ್ಲ. ಕಳಸಾ ವ್ಯಾಪ್ತಿಯಲ್ಲಿ 2010 ರ ನಂತರ ಮಂಜೂರಾಗಿರುವ ಎಲ್ಲಾ ಹಕ್ಕು ಪತ್ರಗಳು ರದ್ದು ಆಗಿವೆ ಎಂದರೆ ನನಗೆ ಮಾಹಿತಿ ಇಲ್ಲ. ನಿ.ಡಿ.8 ಹಕ್ಕು ಪತ್ರದಲ್ಲಿ ಇರುವ ಮನೆ ಹಂಚಿನ ಮನೆಯಾಗಿರುತ್ತದೆ. ನಿ.ಡಿ.8 ರಲ್ಲಿ ಹೇಳಿರುವ ಮನೆಯ ಪೂರ್ವಕ್ಕೆ ದಾವ ಸ್ವತ್ತು ಬರುತ್ತದೆ. ದಾವ ಸ್ವತ್ತಿನ ಮುಂಭಾಗದಲ್ಲಿ ಕಣ, ಅಂಗಳ ಇತ್ತು ಎಂದರೆ ಸಾಕ್ಷಿ ಅಂಗಳ ಈಗಲು ಇದೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನ ಮುಂಭಾಗದಲ್ಲಿ ಇರುವ ಅಂಗಳದ ಜಾಗಕ್ಕೆ ಸಂಬಂಧಿಸಿದಂತೆ ನಾನು ನಿ.ಡಿ.8 ರಂತೆ ಹಕ್ಕು ಪತ್ರವನ್ನು ಪಡೆದಿದ್ದೇನೆ ಎಂದರೆ ಸಾಕ್ಷಿ ದಾವ ಸ್ವತ್ತಿನ ಪಕ್ಕದಲ್ಲಿ ಇರುವ

ಜಾಗಕ್ಕೆ ನಾನು ಹಕ್ಕು ಪತ್ರ ಪಡೆದಿದ್ದೇನೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನಿಂದ 5 ಅಡಿ ದೂರದಲ್ಲಿ ಇರುವ ಜಾಗಕ್ಕೆ ನಾನು ಹಕ್ಕು ಪತ್ರವನ್ನು ಪಡೆದಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನಗೆ ಅಕ್ರಮ ಸಕ್ರಮದಡಿ ಯಾವುದೇ ಜಾಗ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಮತ್ತು ಉಳಿದ ಪ್ರತಿವಾದಿಗಳಿಗೆ ದಾವ ಆಸ್ತಿಯಲ್ಲಿ ಹಿಸ್ಸೆಯನ್ನು ನೀಡಬೇಕೆಂಬ ಉದ್ದೇಶದಿಂದ ನಿ.ಡಿ.8 ಅನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

10. ನನ್ನ ತಂದೆ ಮೊಹಮದ್ ಶೆಕ್ ರವರಿಗೆ ಕಳಸದಲ್ಲಿ 7 ಎಕರೆ ಜಮೀನು ಇತ್ತು. ಆ ಜಮೀನುಗಳನ್ನು 2016 ರಲ್ಲಿ ಮಾರಾಟ ಮಾಡಿದ್ದೇವೆ. ಆ ಜಮೀನನ್ನು ವಾದಿ ಮತ್ತು ಪ್ರತಿವಾದಿಗಳು ನನ್ನ ಒತ್ತಾಯದ ಮೇರೆಗೆ ಮಾರಾಟ ಮಾಡಲು ಒಪ್ಪಿದ್ದರು ಎಂದರೆ ಸರಿಯಲ್ಲ. ಆ ಮಾರಾಟ ಮಾಡಿದ ಜಮೀನಿನ ಹಣದಲ್ಲಿ ಪಾಲನ್ನು ಪಡೆದು ಈಗ ದಾವ ಸ್ವತ್ತು ಸಹ ನನಗೆ ಸೇರಬೇಕು ಎಂದು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.8 ರಂತೆ ಹಕ್ಕು ಪತ್ರ ಪಡೆಯಲು ಎಷ್ಟು ಕಿಮ್ಮತ್ತನ್ನು ಪಾವತಿಸಿದ್ದೇನೆ ಎಂದು ನನಗೆ ನೆನಪಿಲ್ಲ. ಕಾನೂನು ಪ್ರಕಾರ ನನಗೆ ಆಸ್ತಿ ಮಂಜೂರಾಗಿದ್ದರೆ ನಾನು ಕಿಮ್ಮತ್ತನ್ನು ಪಾವತಿಸುತ್ತಿದ್ದೆ, ನನಗೆ ಯಾವುದೇ ಆಸ್ತಿ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ